**ಕರ್ನಾಟಕ ಸರ್ಕಾರ**
**ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ**
**ಜಿಲ್ಲಾಡಳಿತ ಭವನ, ಶಿಡ್ಲಘಟ್ಟ ರಸ್ತೆ**

**ದೂರವಾಣಿ : 08156-277016** **ಇ-ಮೇಲ್ : zpadmckbpur@gmail.com**

---

**ಸಂಖ್ಯೆ: ಜಿಪಂಚಿ/ಆಡಳಿತ/ಗ್ರಾ.ಪಂ.ಚು.ಸ.ಆ.ಘೋಷಣೆ/ಸಿ.ಆರ್./2024-25 ದಿನಾಂಕ:26.06.2024.**

**ರವರಿಗೆ**

**ಕಾರ್ಯನಿರ್ವಾಹಕ ಅಧಿಕಾರಿ**
**ತಾಲ್ಲೂಕು ಪಂಚಾಯಿತಿ**
**ಬಾಗೇಪಲ್ಲಿ/ಚೇಳೂರು/ಚಿಕ್ಕಬಳ್ಳಾಪುರ**
**ಚಿಂತಾಮಣಿ/ಗೌರಿಬಿದನೂರು/ಶಿಡ್ಲಘಟ್ಟ**
**ಮಂಚೇನಹಳ್ಳಿ/ಗುಡಿಬಂಡೆ.**

**ಮಾನ್ಯರೇ,**

**ವಿಷಯ:** 2023-24ನೇ ಸಾಲಿನ ಗ್ರಾಮ ಪಂಚಾಯಿತಿ ಸದಸ್ಯರ ಆಸ್ತಿ ಘೋಷಣೆಗೆ ಸಂಬಂದಿಸಿದ ಜುಲೈ ಮಾಹೆಯ ವರದಿ ಸಲ್ಲಿಸುವ ಬಗ್ಗೆ.

**ಉಲ್ಲೇಖ:** ಅಧೀನ ಕಾರ್ಯದರ್ಶಿಗಳು, ರಾಜ್ಯ ಚುನಾವಣಾ ಆಯೋಗ ಕರ್ನಾಟಕ ರವರ ಪತ್ರದ ಸಂಖ್ಯೆ: SECK/RLB/AL(GP)/3/2024-ULB ದಿನಾಂಕ: 20.06.2024.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2023-24ನೇ ಸಾಲಿನ ಗ್ರಾಮ ಪಂಚಾಯಿತಿ ಸದಸ್ಯರ ಆಸ್ತಿ ಘೋಷಣೆಯನ್ನು ಆರ್ಥಿಕ ವರ್ಷ ಮುಗಿದ ಒಂದು ತಿಂಗಳ ನಂತರ ಏಪ್ರಿಲ್ ಮಾಹೆಯ ಅಂತ್ಯದೊಳಗೆ ಆಯೋಗಕ್ಕೆ ಸಲ್ಲಿಸಬೇಕಿರುತ್ತದೆ ಹಾಗೂ ತಡವಾಗಿ ಸಲ್ಲಿಸಿದ ಸಂದರ್ಭದಲ್ಲಿ ಜುಲೈ ಮೊದಲನೇ ವಾರದಲ್ಲಿ ಘೋಷಣೆಯನ್ನು ದಾಖಲು ಮಾಡಿದ ಮತ್ತು ಘೋಷಣೆಯನ್ನು ಸಲ್ಲಿಸದೇ ಇರುವಂಥ ಸದಸ್ಯರುಗಳ ವಿವರವನ್ನು ನೀಡಲಾದ ನಮೂನೆಯಲ್ಲಿ ಷರಾ ಕಾಲಂನಲ್ಲಿ ಕಾರಣವನ್ನು ತಪ್ಪದೇ ನಮೂದಿಸಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಸಹಿಯೊಂದಿಗೆ ತಾಲ್ಲೂಕುವಾರು ಕ್ರೋಢೀಕೃತ ವರದಿಯನ್ನು ಆಯೋಗಕ್ಕೆ ಸಲ್ಲಿಸುವಂತೆ ಉಲ್ಲೇಖಿತ ಪತ್ರದಲ್ಲಿ ತಿಳಿಸಿರುತ್ತಾರೆ.

ಅದರಂತೆ ಉಲ್ಲೇಖಿತ ಪತ್ರವನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸುತ್ತಾ, ಚಿಕ್ಕಬಳ್ಳಾಪುರ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಜುಲೈ-2024ರ ಅಂತ್ಯಕ್ಕೆ ಆಸ್ತಿ ಘೋಷಣೆಯನ್ನು ಸಲ್ಲಿಸಿದ ಹಾಗೂ ಸಲ್ಲಿಸದೆ ಇರುವ ಸದಸ್ಯರ ಮಾಹಿತಿಯನ್ನು ನಿಗಧಿತ ನಮೂನೆಯಲ್ಲಿ ಪಡೆದು ತಾಲ್ಲೂಕುವಾರು ಕ್ರೋಢೀಕರಿಸಿ ದೃಢೀಕೃತ ವರದಿಯನ್ನು ತುರ್ತಾಗಿ ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.

**ತಮ್ಮ ವಿಶ್ವಾಸಿ**

**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ**
**ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ**

**ಪ್ರತಿಯನ್ನು:**

1. ಅಧೀನ ಕಾರ್ಯದರ್ಶಿಗಳು, ರಾಜ್ಯ ಚುನಾವಣಾ ಆಯೋಗ ಕರ್ನಾಟಕ, ಬೆಂಗಳೂರು ರವರ ಮಾಹಿತಿಗಾಗಿ.
2. ಜಿಲ್ಲೆಯ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅದಿಕಾರಿಗಳಿಗೆ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ ಅಗತ್ಯ ಕ್ರಮಕ್ಕಾಗಿ.
3. ಕಛೇರಿ ಪ್ರತಿ.

/2024

# ರಾಜ್ಯ ಚುನಾವಣಾ ಆಯೋಗ, ಕರ್ನಾಟಕ

ನಂ. 16, 2ನೇ ಮತ್ತು 3ನೇ ಮಹಡಿ, ಬಳ್ಳಾರಿ ರಸ್ತೆ, ಸದಾಶಿವನಗರ, ಬೆಂಗಳೂರು-560080.
ದೂರವಾಣಿ ಸಂಖ್ಯೆ: 080-22205189/93, ಇ-ಮೇಲ್: sec.karnataka@ka.gov.in

ಕಡತ ಸಂಖ್ಯೆ: SECK/RLB/AL(GP)/3/2024-ULB　　　　ದಿನಾಂಕ: 20-06-2024

ಎಲ್ಲಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯಿತಿ.

ಮಾನ್ಯರೆ,

ವಿಷಯ: 2023-24ನೇ ಸಾಲಿನ ಗ್ರಾಮ ಪಂಚಾಯಿತಿ ಸದಸ್ಯರ ಆಸ್ತಿ ಘೋಷಣೆಗೆ ಸಂಬಂದಿಸಿದ ಜುಲೈ ಮಾಹೆಯ ವರದಿ ಸಲ್ಲಿಸುವ ಬಗ್ಗೆ.

ಉಲ್ಲೇಖ: ರಾಜ್ಯ ಚುನಾವಣಾ ಆಯೋಗದ ಸುತ್ತೋಲೆ ಸಂಖ್ಯೆ: ರಾಚುಆ:63:ಟಿಜಿಡ್‌ಪಿ:2016, ದಿನಾಂಕ: 06.09.2016.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2023-24ನೇ ಸಾಲಿನ ಗ್ರಾಮ ಪಂಚಾಯಿತಿ ಸದಸ್ಯರ ಆಸ್ತಿ ಘೋಷಣೆಯನ್ನು ಆರ್ಥಿಕ ವರ್ಷ ಮುಗಿದ ಒಂದು ತಿಂಗಳ ನಂತರ ಏಪ್ರಿಲ್ ಮಾಹೆಯ ಅಂತ್ಯದೊಳಗೆ ಆಯೋಗಕ್ಕೆ ಸಲ್ಲಿಸಬೇಕಿರುತ್ತದೆ ಹಾಗೂ ತಡವಾಗಿ ಸಲ್ಲಿಸಿದ ಸಂದರ್ಭದಲ್ಲಿ ಜುಲೈ ಮೊದಲನೇ ವಾರದಲ್ಲಿ ಘೋಷಣೆಯನ್ನು ದಾಖಲು ಮಾಡಿದ ಮತ್ತು ಮಾಡದೇ ಇರುವಂಥ ಸದಸ್ಯರ ಪಟ್ಟಿಯನ್ನು ಪಿ.ಡಿ.ಒ. ರವರು ಆಯೋಗಕ್ಕೆ ಕಳುಹಿಸಬೇಕಿರುತ್ತದೆ.

ಅದರಂತೆ, ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಗ್ರಾಮ ಪಂಚಾಯಿತಿ ಪಿ.ಡಿ.ಒ. ರವರು ತಮ್ಮ ಗ್ರಾಮ ಪಂಚಾಯಿತಿಗೆ ಸಂಬಂಧಿಸಿದ ಜುಲೈ ಮಾಹೆಯ ವರದಿಯನ್ನು ಸಲ್ಲಿಸುವಂತೆ ಹಾಗೂ ಘೋಷಣೆಯನ್ನು ಸಲ್ಲಿಸದೇ ಇರುವಂಥ ಸದಸ್ಯರುಗಳ ವಿವರವನ್ನು ಷರಾ ಕಾಲಂನಲ್ಲಿ ಕಾರಣವನ್ನು ತಪ್ಪದೇ ನಮೂದಿಸಿ ತಮ್ಮ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಸಹಿ ಮಾಡಿದ ವರದಿಯನ್ನು ಸಲ್ಲಿಸುವುದು.

ತದನಂತರ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯವರು ಪಿ.ಡಿ.ಒ. ರವರುಗಳಿಂದ ಸ್ವೀಕೃತವಾದ ವರದಿಯನ್ನು ಕ್ರೋಢೀಕರಿಸಿ ತಾಲ್ಲೂಕುವಾರು ಮಾಹಿತಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ರವರಿಗೆ ಕಳುಹಿಸುವುದು.

ಮುಖ್ಯ ಕಾರ್ಯಾನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ರವರು ಸದರಿ ತಾಲ್ಲೂಕುವಾರು ಮಾಹಿತಿಯನ್ನು ದೃಢೀಕರಿಸಿ ಆಯೋಗಕ್ಕೆ ಸಲ್ಲಿಸಲು ಈ ಮೂಲಕ ಕೋರಿದೆ.

ತಮ್ಮ ವಿಶ್ವಾಸಿ,

Signed by
Narappa Revanasiddappa Nagaraju
Date: 20-06-2024 13:24:44
ಅಧೀನ ಕಾರ್ಯದರ್ಶಿ,
ರಾಜ್ಯ ಚುನಾವಣಾ ಆಯೋಗ, ಕರ್ನಾಟಕ.

## ನಮೂನೆ

| ಕ್ರ. ಸಂ. | ಜಿಲ್ಲೆ | ತಾಲ್ಲೂಕು | ಗ್ರಾ.ಪಂ. | ಒಟ್ಟು ಸದಸ್ಯರು | ನಮೂನೆ-1 ಸಲ್ಲಿಸಿದ ಸದಸ್ಯರು | ನಮೂನೆ-1 ಸಲ್ಲಿಸದ ಸದಸ್ಯರು | ಷರಾ |
|---|---|---|---|---|---|---|---|
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |